638 (462) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) :– ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ರಾಜ್ಯದಲ್ಲಿ ಎಷ್ಟು ಉದ್ಯೋಗ ವಿನಿಮಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ ?

ಆ) ಕಳೆದ ಎರಡು ವರ್ಷಗಳಲ್ಲಿ ಈ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಎಷ್ಟು ಅಭ್ಯರ್ಥಿಗಳು ನೋಂದಾಯಿಸಿದ್ದಾರೆ ? ಮತ್ತು ಎಷ್ಟು ಅಭ್ಯರ್ಥಿಗಳು ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕ ಕಳೆದ 02 ವರ್ಷಗಳಲ್ಲಿ ನೇಮಕಗೊಂಡಿದ್ದಾರೆ?

ಇ) ನಿರುದ್ಯೋಗಿಗಳಿಗಾಗಿ ಹೊಸ ತರಬೇತಿ ಪ್ರಸ್ತಾವನೆಯು ಸರ್ಕಾರದಲ್ಲಿಯೇ? ಮತ್ತು ಶಿಷ್ಯ ವೇತನ ಎನು ?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :–

ಅ) 30

ಆ)

ವರ್ಷ	ನೋಂದಾಯಿಸಿರುವವರು	ಉದ್ಯೋಗ ಪಡೆದಿರುವವರು
2005	1,45,415	1,725
2006	1,07,767	2,290
ಒಟ್ಟು	2,53,182	4,015

ಇ) ಅಂತಹ ಕಾರ್ಯಕ್ರಮ ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿ ಇರುವುದಿಲ್ಲ.

640 (1008) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) :– ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಗ್ರಾಮೀಣ ಯುವ ಜನತೆಗೆ ತರಬೇತಿಗೊಳಿಸಲು ಕೌಶಲ್ಯ ಆಧಾರಿತ ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸಲು ಉದ್ದೇಶಿಸಿದ ಅಥವಾ ಮುಂದೆ ಬಂದ ಟ್ರಸ್ಟ್ ಅಥವಾ ಸಂಘಕ್ಕೆ ಹಣಕಾಸಿನ ನೆರವು ನೀಡುವ ಕಾರ್ಯಕ್ರಮಗಳನ್ನೇನಾದರೂ ಸರ್ಕಾರವು ಹೊಂದಿದೆಯೇ ? ಹಾಗಿದ್ದಲ್ಲಿ ವಿವರಗಳನ್ನು ಮತ್ತು ಮಾನದಂಡಗಳನ್ನು ದಯವಿಟ್ಟು ಒದಗಿಸಿ ;

ಆ) ಇಲ್ಲದಿದ್ದಲ್ಲಿ, ಅನೇಕ ಕಾರ್ಖಾನೆಗಳಲ್ಲಿ ಅನೇಕ ಖಾಲಿ ಹುದ್ದೆಗಳು ಇರುವುದರಿಂದ ಶಾಲೆಯಿಂದ ಹೊರಗುಳಿದ ಅನಾನುಕೂಲ ಗ್ರಾಮೀಣರಿಗೆ ಅನುಕೂಲವಾಗುವಂತಹ ಕಾರ್ಯಕ್ರಮವನ್ನು ರೂಪಿಸಲು ಸರ್ಕಾರಕ್ಕೆ ಸಲಹಾತ್ಮಕವಲ್ಲವೇ ?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :–

ಅ) ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿ ಅಂತಹ ಯೋಜನೆ ಇಲ್ಲ

ಆ) ಮಾಡ್ಯುಲಾರ್ ಎಂಪ್ಲಾಯೆಬಲ್ ಸ್ಕಿಲ್ ಯೋಜನೆಯನ್ನು ರೂಪಿಸಲಾಗುತ್ತಿದೆ.

641 (1009) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) :–ವೈದಯಕೀಯ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ನೆರೆ ರಾಜ್ಯವಾದ ಕೇರಳದಲ್ಲಿ ಉನ್ನತ ಶಿಕ್ಷಣದ ವಿವಿಧ ಕೋರ್ಸುಗಳಲ್ಲಿ ಆಂಗ್ಲೋ ಇಂಡಿಯನ್ ವಿದ್ಯಾರ್ಥಿಗಳು ಕರ್ನಾಟಕ ರಾಜ್ಯಕ್ಕಿಂತ ಹೆಚ್ಚು ಸೀಟುಗಳ ಕೋಟಾವನ್ನು ಪಡೆದು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಸರ್ಕಾರವು ವೈದ್ಯಕೀಯ, ಇಂಜಿನಿಯರಿಂಗ್, ಬಯೋಟೆಕ್ನಾಲಜಿ, ಬಿ.ಎಸ್ಸಿ., (ನರ್ಸಿಂಗ್) ಮತ್ತು ದಂತ ವೈದ್ಯಕೀಯ ಇತ್ಯಾದಿ ವಿವಿಧ ಕೋರ್ಸುಗಳಲ್ಲಿ ಆಂಗ್ಲೋ ಇಂಡಿಯನ್ಸ್‌ಗೆ ವ್ಯಾಸಂಗ ಮಾಡಲು ಕೋಟಾ ಸೀಟುಗಳನ್ನು ಹೆಚ್ಚಿಸಿ ಏಕೆ ಅವಕಾಶವನ್ನು ನೀಡಬಾರದು ?

ಶ್ರೀ ವಿ. ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) :–

ಅ) ಇಲ್ಲ ಉದ್ಭವಿಸುವುದಿಲ್ಲ

642 (283) ಶ್ರೀ ಜಯಪ್ರಕಾಶ್ ಹೆಗ್ಗಡೆ (ಬ್ರಹ್ಮಾವರ) :–ವೈದಯಕೀಯ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) 2006–07ನೇ ಸಾಲಿನಲ್ಲಿ ರಾಜ್ಯದಲ್ಲಿ ಎಷ್ಟು ಜಾತಿ ಅಲ್ಪಸಂಖ್ಯಾತ ಮತ್ತು ಭಾಷಾ ಅಲ್ಪಸಂಖ್ಯಾತ ಕಾಲೇಜುಗಳಿಗೆ ಸರ್ಕಾರವು ಸೀಟ್ ಮ್ಯಾಟ್ರಿಕ್ಸ್ ನೀಡಲಾಗಿತ್ತು (ಕಾಲೇಜುವಾರು ವಿವರ ನೀಡುವುದು) ?

ಶ್ರೀ ವಿ. ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) :–

ವೈದ್ಯಕೀಯ ಕಾಲೇಜುಗಳು

ಅ)	ಧಾರ್ಮಿಕ ಅಲ್ಪಸಂಖ್ಯಾತ	...	3
	ಭಾಷಾ ಅಲ್ಪಸಂಖ್ಯಾತ	...	7
	ದಂತ ವೈದ್ಯಕೀಯ ಕಾಲೇಜುಗಳು		
	ಧಾರ್ಮಿಕ ಅಲ್ಪಸಂಖ್ಯಾತ	...	3
	ಭಾಷಾ ಅಲ್ಪಸಂಖ್ಯಾತ	...	9